SC:89/2025
PW:01 CW:01

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 89/2025

| | |
|---|---|
| PW | 01 |
| CW | 01 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 02.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಛಾಯಕುಮಾರ್ |
| ತಂದೆಯ ಹೆಸರು | : | ಸಂಜೀವಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಾಸಸ್ಥಳ | : | ತುಮಕೂರು |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಮೃತ ರವಿಚಂದ್ರ ನನಗೆ ಅಣ್ಣನಾಗಬೇಕು . ಚಾಸಾ.2 ರಿಂದ 4,9,10 ಗೊತ್ತು . ಚಾಸಾ.5 ನನ್ನ ತಾಯಿಯಾಗಿರುತ್ತಾರೆ , ಚಾಸಾ.6,8,11 ರಿಂದ 15 ಗೊತ್ತಿಲ್ಲ , ಚಾಸಾ.7 ನನ್ನ ಹೆಂಡತಿ ಇರುತ್ತಾಳೆ . ಉಳಿದ ಸಾಕ್ಷಿದಾರರ ಪರಿಚಯ ಇರುವುದಿಲ್ಲ . ಈ ದಿನ ನ್ಯಾಯಾಲಯದ ಮುಂದೆ ವಿ.ಸಿ ಮುಖಾಂತರ ಹಾಜರುಪಡಿಸಿದ ಆರೋಪಿಯ ಪರಿಚಯ ಇರುತ್ತದೆ .

2. ನನ್ನ ತಂದೆ ತಾಯಿಗೆ ನಾನು ಮತ್ತು ನನ್ನ ಅಣ್ಣ ರವೀಚಂದ್ರ ಇಬ್ಬರು ಮಕ್ಕಳು ಇರುತ್ತೇವೆ . ನನ್ನ ಅಣ್ಣ ರವೀಚಂದ್ರ ವೆಲ್ಡಿಂಗ್ ಕೆಲಸ ಮಾಡುತ್ತಿದ್ದನು , ನಮ್ಮ ಮನೆಯ

ಪಕ್ಕದಲ್ಲಿ ವಾಸವಾಗಿದ್ದನು . ನನ್ನ ಅಣ್ಣನಿಗೆ ಇಬ್ಬರು ಗಂಡು ಮಕ್ಕಳಿದ್ದು ಅವರ ಹೆಂಡತಿ ಗಾರ್ಮೆಂಟ್ ನಲ್ಲಿ ಕೆಲಸ ಮಾಡುತ್ತಾರೆ . ನಾನು ಆಟೋ ಚಾಲಕನಾಗಿರುತ್ತೇನೆ . ನನಗೆ ಇಬ್ಬರು ಮಕ್ಕಳಿರುತ್ತಾರೆ . ನನ್ನ ಹೆಂಡತಿಯೂ ಸಹಾ ಗಾರ್ಮೆಂಟ್ ಕೆಲಸ ಮಾಡುತ್ತಿದ್ದು ನನ್ನ ಮನೆಯೂ ಸಹಾ ನನ್ನ ಅಣ್ಣನ ಮನೆಯ ಪಕ್ಕದಲ್ಲಿ ಇರುತ್ತದೆ .

3. ಆರೋಪಿಯು ಆಟೋ ಚಾಲಕನಾಗಿದ್ದು, ನನ್ನ ಮೃತ ಅಣ್ಣ ಆರೋಪಿತನ ಆಟೋದಲ್ಲಿ ಹೋಗಿ ಬರುವುದು ಮಾಡುತ್ತಿದ್ದನು . ಹೀಗಾಗಿ ನನ್ನ ಅಣ್ಣನಿಗೆ ಆರೋಪಿ ಪರಿಚಯ ಇರುತ್ತಾನೆ . ಆರೋಪಿಯು ಹಿಂದೂಪುರದ ಯಾವುದೋ ಒಂದು ಲೇಡೀಸ್ ಕೇಸಿಗೆ ಸಂಬಂಧಿಸಿದಂತೆ ನನ್ನ ಅಣ್ಣನಿಗೆ ಹಣ ಕೊಡುವಂತೆ ಕೇಳುತ್ತಿದ್ದನು . ನನ್ನ ಅಣ್ಣ ಹಣ ನನ್ನ ಬಳಿ ಇಲ್ಲ ಎಂದು ಹೇಳಿದರೆ ಆರೋಪಿಯು ಚಾಕು ತೋರಿಸಿ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದನು ಎಂದು ನನ್ನ ಅಣ್ಣ ನನಗೆ ಹೇಳಿರುತ್ತಾನೆ .

4. ದಿಃ26.06.2025 ರಂದು ಮ.02.30 ಗಂಟೆ ಸಮಯದಲ್ಲಿ ನನ್ನ ಅಣ್ಣ ಮನೆಯಲ್ಲಿ ಇದ್ದಾಗ ಆರೋಪಿಯು ಫೋನ್ ಮಾಡಿ ಬಾ ಹೋಗೋಣ ಎಂದು ಹೇಳಿರುತ್ತಾನೆ . ಆರೋಪಿಯು ನನ್ನ ಅಣ್ಣನಿಗೆ ಫೋನ್ ಮಾಡಿ ಕುಡುಮಲಕುಂಟೆ ಯಲ್ಲಿರುವ ಗಂಗೋತ್ರಿ ಬಾರ್ ಗೆ ಕುಡಿಯಲು ಕರೆದುಕೊಂಡು ಹೋದನು . ಆರೋಪಿ ಮತ್ತು ನನ್ನ ಅಣ್ಣ ಇಬ್ಬರೂ ಸೇರಿ ಕುಡಿದಿದ್ದು ನಂತರ ಆರೋಪಿಯು ನನ್ನ ಅಣ್ಣನನ್ನು ಆಚೆ ಕರೆದುಕೊಂಡು ಬಂದು ಚಾಕುವಿನಿಂದ ಹೊಟ್ಟೆಯ ಎಡಭಾಗಕ್ಕೆ ತಿವಿದು ಕೊಲೆ ಮಾಡಿರುತ್ತಾನೆ . ಸದರಿ ವಿಷಯವನ್ನು ನವೀನ್ ಕುಮಾರ್(ಚಾಸಾ.2) ರವರು ಚಾಸಾ.4 ವಿಜಯಲಕ್ಷ್ಮೀ ರವರಿಗೆ ತಿಳಿಸಿದ್ದು ನಂತರ ಚಾಸಾ.4 ರವರು ನನಗೆ ತಿಳಿಸಿರುತ್ತಾರೆ .

5. ನಂತರ ನಾನು ಮತ್ತು ನನ್ನ ಅಮ್ಮ ಸೇರಿ ಸುಮಾರು ಮ.4.30 ಗಂಟೆಗೆ ಬಾರ್ ಹತ್ತಿರ ಹೋಗಿದ್ದೆವು . ಅಲ್ಲಿ ನನ್ನ ಅಣ್ಣ ಸತ್ತು ಬಿದ್ದಿದ್ದನು . ನನ್ನ ಅಣ್ಣನಿಗೆ ಹೊಟ್ಟೆಗೆ ರಕ್ತ ಗಾಯ ಆಗಿ ರಕ್ತ ಬಿದ್ದಿತ್ತು . ನಂತರ ಪೊಲೀಸರು ಸ್ಥಳಕ್ಕೆ ಬಂದು ಎಲ್ಲ ಕೇಳಿರುತ್ತಾರೆ . ನನಗೆ ಬರೆಯಲು ಬಾರದೇ ಇದ್ದುದ್ದರಿಂದ ನನ್ನ ಹೆಂಡತಿ (ಚಾಸಾ.7) ರವರು ನಾನು ಹೇಳಿರುವಂತೆ

ಬರೆದಿದ್ದು ಪೊಲೀಸರಿಗೆ ಕೊಟ್ಟಿರುತ್ತೇನೆ . ಸದರಿ ಬರವಣಿಗೆಗೆ ನಾನು ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತೇನೆ . ಸಾಕ್ಷಿಯು ಗುರುತಿಸಿದ ಸಹಿ ಇರುವ ಪಿರ್ಯಾದಿಯನ್ನು **ನಿಪಿ.1** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.1 (ಎ)** ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿರುವ ದೂರನ್ನು ಆರೋಪಿಯ ವಿರುದ್ಧ ಸಲ್ಲಿಸಿರುತ್ತೇನೆ .

6. ನಂತರ ಪೊಲೀಸ್‌ರವರು ಸ್ಥಳಕ್ಕೆ ಬಂದು ಎಲ್ಲವನ್ನು ನೋಡಿಕೊಂಡು ಬರೆದುಕೊಂಡಿರುತ್ತಾರೆ . ಸದರಿ ಬರವಣಿಗೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ಗುರುತಿಸಿದ ಸಹಿ ಇರುವ ಪಂಚನಾಮೆಯನ್ನು **ನಿಪಿ.**2 ಎಂದು ಸಾಕ್ಷಿಯ ಸಹಿಯನ್ನು **ನಿಪಿ.**2 **(ಎ)** ಎಂದು ಗುರುತಿಸಲಾಯಿತು. ನಿಪಿ.2 ರಲ್ಲಿ ಫೋಟೋಗಳಲ್ಲಿ ನಾನು , ಚಾಸಾ.8 ರಿಂದ 11 ರವರು ಇರುತ್ತೇವೆ . ಚಾಸಾ.8 ರಿಂದ 11 ರವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ . ಪಂಚನಾಮೆಯ ಕಾಲಕ್ಕೆ ಪೊಲೀಸರು ಕೊಲೆ ಮಾಡಿದ ಸ್ಥಳದಲ್ಲಿ ಬಿದ್ದಿದ್ದ ರಕ್ತ ಮಿಶ್ರಿತ ಮಣ್ಣು ಮತ್ತು ಮಾದರಿ ಮಣ್ಣನ್ನು ತೆಗೆದುಕೊಂಡಿರುತ್ತಾರೆ .

7. ಆರೋಪಿಯು ನನಗೆ ಹಣ ಬೇಕು ಎಂದು ನನ್ನ ಅಣ್ಣನಿಗೆ ಕೇಳಿದ್ದು ನನ್ನ ಅಣ್ಣ ಹಣ ಕೊಡದೇ ಇದ್ದಿದ್ದಕ್ಕೆ ಆರೋಪಿಯು ನನ್ನ ಅಣ್ಣನನ್ನು ಚಾಕುವಿನಿಂದ ತಿವಿದು ಕೊಲೆ ಮಾಡಿರುತ್ತಾನೆ . ನನ್ನ ಅಣ್ಣ ಸಾಯುವ ಕಾಲಕ್ಕೆ ಯಾವ ಬಟ್ಟೆಗಳನ್ನು ಹಾಕಿದ್ದನು ಎಂದು ನೋಡಿದ್ದು ಅವುಗಳನ್ನು ತೋರಿಸಿದರೆ ಗುರುತಿಸುತ್ತೇನೆ .

8. ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಅರಗಿನಿಂದ ಸೀಲ್ ಮಾಡಿದ ಬಟ್ಟೆ ಕವರಗಳನ್ನು ತೆರೆದು ಅದರಲ್ಲಿರುವ ವಸ್ತುವನ್ನು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು ನೀಡಲಾಯಿತು. ಅದರಂತೆ ನ್ಯಾಯಾಲಯದ ಮುಂದೆ ಇರುವ ಸೀಲ್ ಆದ ಕವರ್ ಅನ್ನು ತೆರೆದು ತೋರಿಸಲಾಯಿತು. ಸಾಕ್ಷಿಯು ಸದರಿ ಬಟ್ಟೆಯನ್ನು ನೋಡಿ ಅದು ಮೃತನ ಶರ್ಟ್ ಇರುತ್ತದೆ ಎಂದು ಗುರುತಿಸಿದ್ದು ಅದನ್ನು **ಮುಮಾ.**1 ಎಂದು ಗುರುತಿಸಲಾಯಿತು. ಇನ್ನೊಂದು ಕವರ್ ನಲ್ಲಿರುವ ಬಟ್ಟೆಯನ್ನು ತೆರೆದು ತೋರಿಸಿದಾಗ

ಸಾಕ್ಷಿಯು ಅದು ಮೃತನ ಪ್ಯಾಂಟ್ ಇರುತ್ತದೆ ಎಂದು ಗುರುತಿಸಿದ್ದು ಅದನ್ನು **ಮುಮಾ.2** ಎಂದು ಗುರುತಿಸಲಾಯಿತು.

9. 2 ತಿಂಗಳ ನಂತರ ನನ್ನನ್ನು ಮತ್ತು ಚಾಸಾ.9 ಮತ್ತು 10 ರವರನ್ನು ಪೊಲೀಸರು ಗಂಗೋತ್ರಿ ಬಾರ್ ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ನೋಡಿ ಅದರಲ್ಲಿರುವ ದೃಶ್ಯಾವಳಿಗಳನ್ನು ತೋರಿಸಿ ಪೆನ್‌ಡ್ರೈವ್‌ಗೆ ವರ್ಗಾವಣೆ ಮಾಡಿ ಕೊಂಡು ಪಂಚನಾಮೆ ಮಾಡಿರುತ್ತಾರೆ . ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ .

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಗೆ ಮುಂದೂಡಲಾಯಿತು)**

**ಆರೋಪಿಗೆ ಕೇಳಲಾಗಿ ಆರೋಪಿಯು ಸಾಕ್ಷಿಯ ಹೇಳಿಕೆಯನ್ನು ವಿ.ಸಿ ಮೂಲಕ ಕೇಳಿ ತಿಳಿದುಕೊಂಡಿರುವುದಾಗಿ ನ್ಯಾಯಾಲಯಕ್ಕೆ ತಿಳಿಸಿರುತ್ತಾನೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 02.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.